# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ
# ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆಃ59/2017

**ಪಿ.ಡಬ್ಲ್ಯೂಃ 6 (ಸಿಡಬ್ಲ್ಯೂಃ 10 )**

**ಸಾಕ್ಷಿದಾರರ ಹೆಸರು : ಶ್ರೀ ಶಿವರಾಜ**
**ತಂದೆಯ ಹೆಸರು : ವೀರಭದ್ರಪ್ಪ**
**ವಯಸ್ಸು : 30 ವರ್ಷ**
**ವೃತ್ತಿ : ಗ್ರಾಮ ಲೆಕ್ಕಾಧಿಕಾರಿ**
**ವಾಸ ಸ್ಥಳ : ಸಿರುಗುಪ್ಪ**

**ಸಾಕ್ಷಿಯನ್ನು ದಿನಾಂಕ 19.11.2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ದಿಃ22.1.2015 ರಂದು ತಹಶೀಲ್ದಾರ್ ರವರ ಆದೇಶದ ಮೇರೆಗೆ ನಾನು ಬಳ್ಳಾರಿಯ ಲೋಕಾಯುಕ್ತ ಕಚೆರೀಗೆ ಹೋಗಿದ್ದು ಲೋಕಾಯುಕ್ತ ಕಚೇರಿಯಲ್ಲಿ ಠಾಣೆಯ ಡಿ.ವೈ.ಎಸ್.ಪಿ ಯವರನ್ನು ಬೇಟಿಯಾಗಿರುತ್ತೇನೆ. ನಾನು ಹೋದಾಗ ಚಾಸಾ.9 ಗೌಸ್ ಬಾಷಾ ಇದ್ದರು. ಠಾಣೆಯಲ್ಲಿ ಡಿ.ವೈ.ಎಸ್.ಪಿ ರವರು ಒಂದು ತನಿಖೆಗೆ ಹೋಗಬೇಕಾಗಿದೆ , ಬೆಳಿಗ್ಗೆ 3.30 ಗಂಟೆಗೆ ಬರಬೇಕಾಗಿದೆ ಎಂದು ಹೇಳಿದರು.

**2.** ದಿಃ23.1.2015 ರಂದು ಬೆಳಿಗ್ಗೆ ನಾನು , ಡಿ.ವೈ.ಎಸ್.ಪಿ ಸಿಬ್ಬಂದಿಗಳು , ಗೌಸ್ ಬಾಷಾ ಸೇರಿಕೊಂಡು ಜೀಪ್ ನಲ್ಲಿ ಆಂದ್ರ ಪ್ರದೇಶದ ಗೆದ್ದಲೂರಿನಲ್ಲಿರುವ ತಾಲ್ಲೂಕು ಕಚೇರಿಗೆ ಹೋಗಿರುತ್ತೇವೆ. ಕಚೇರಿಯಲ್ಲಿ ಡೆಪ್ಯೂಟಿ ತಹಶೀಲ್ದಾರ್ ಖಾದರ್ ಅಲಿ ರವರು ಇದ್ದು,

**Spl.C.No. 59/2017**
**P.W.6 (C.W10.)**
**Date : 19.11.2024**

ಡಿ.ವೈ.ಎಸ್.ಪಿ ರವರು ಅವರಿಗೆ ಕೊತ್ತಕೋಟ ಗ್ರಾಮದ ಸರ್ವೆ ನಂಃ107, 108 ಮತ್ತು 113 ಜಮೀನನ್ನು ತೋರಿಸಬೇಕು ಎಂದು ಹೇಳಿದರು. ಅದರಂತೆ ಗ್ರಾಮ ಲೆಕ್ಕಾಧಿಕಾರಿ ಶ್ರೀನಿವಾಸ್ ಮತ್ತು ರಾಧಾಕೃಷ್ಣ ರೆವಿನ್ಯೂ ಇನ್ಸ ಪೆಕ್ಟರ್ ರವರು ನಮ್ಮನ್ನು ಕೊತ್ತ ಕೋಟ ಗ್ರಾವುದಲ್ಲಿರುವ ಸದರಿ ಜಮೀನಿಗೆ ಕರೆದುಕೊಂಡು ಹೋದರು. ಸದರಿ ಜಮೀನಿನಲ್ಲಿ ಕಡ್ಲೆಬೇಳೆ ಬೆಳೆದಿದ್ದರು. ಸದರಿ ಜಮೀನು ಆರೋಪಿ ಎಂ,ಸಿ ಸುಬ್ರಹ್ಮಣ್ಯ ರೆಡ್ಡಿ ರವರಿಗೆ ಸೇರಿದ್ದು ಎಂದು ತಿಳಿಸಿದರು. ಸದರಿ ಜಮೀನಿನಲ್ಲಿ ಒಂದು ಕೊಳವೆಬಾವಿ ಇದ್ದು ಒಂದು ಪಂಚನಾಮೆ ಮಾಡಿದ್ದಾರೆ. ಪಂಚನಾಮೆಯನ್ನು **ನಿಪಿ.42** ಎಂದು, ಸಾಕ್ಷಿಯ ಸಹಿಯನ್ನು **42 ಎ** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12.00 ರಿಂದ 2.00 ಗಂಟೆ ವರೆಗೆ ಬರೆಯಲಾಗಿದೆ.

**<u>ಪಾಟೀ ಸವಾಲುಃ ಶ್ರೀ ಎಲ್ ಎಸ್ ಕೆಃ ವಕೀಲರು ಆರೋಪಿಯ ಪರಃ</u>**

**3** ಲೋಕಾಯುಕ್ತ ರವರು ನಮಗೆ ಲಿಖಿತ ನೋಟಿಸ್ ಕೊಟ್ಟಿಲ್ಲ. ನಮ್ಮ ಮೇಲಾಧಿಕಾರಿಗಳು ನಮಗೆ ಪಂಚನಾಮೆಗೆ ಭಾಗವಹಿಸುಂತೆ ಲಿಖಿತ ಆದೇಶ ನೀಡಿಲ್ಲ. ಫೋನ್ ಮುಖಾಂತರ ತಿಳಿಸಿದ್ದಾರೆ. ಈ ಪಂಚನಾಮೆಗೆ ಹಾಜರಾಗುವ ಮೊದಲು ನಾನು ಬೇರೆ ಪಂಚನಾಮೆಗೆ ಭಾಗವಹಿಸಿದ್ದೇನೆ. ಪೊಲೀಸರು ನನಗೆ ಸರ್ಚ್ ವಾರಂಟ್ ತೋರಿಸಿಲ್ಲ.

**4.** ಸದರಿ ಜಮೀನು ಆರೋಪಿಯ ಹೆಸರಿಗೆ ಹೇಗೆ ಬಂತು ಎಂದು ನಾನು ತಿಳಿದುಕೊಂಡಿಲ್ಲ. 3 ಸರ್ವೆ ನಂಬರ್ ಗಳು ಒಂದೇ ಜಾಗದಲ್ಲಿದೆ. ಆ ಜಾಗದಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯುತ್ತಾರೆ ಎಂದುನಾವು ಕಂದಾಯ ಅಧಿಕಾರಿಗಳನ್ನು ವಿಚಾರಿಸಿಲ್ಲ. ಸದರಿ ಜಮೀನಿನಲ್ಲಿ ಪ್ರತಿ ವರ್ಷ ಅಂದಾಜು ಎಷ್ಟು ಉತ್ಪಾದನೆ ಇರುತ್ತದೆ ಎಂದು ತಿಳಿದುಕೊಂಡಿಲ್ಲ.

**Spl.C.No. 59/2017**
**P.W.6 (C.W10.)**
**Date : 19.11.2024**

ಅಲ್ಲಿನ ದಾಖಲೆಗಳಲ್ಲಿ ಆರೋಪಿಯ ಹೆಸರು ಮಾತ್ರ ಇತ್ತು. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿದೆ. ನಾನು ಪಂಚನಾಮೆಯಲ್ಲಿ ಭಾಗವಹಿಸಿಲ್ಲ ಎನ್ನುವುದು ಸರಿಯಲ್ಲ.ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**